# ಸ್ವಾಮಿ ವಿವೇಕಾನಂದರ ಆತ್ಮಬಂಧು ಜೋಸೆಫಿನ್ ಮೆಕ್ ಲೆಡ್

ಪ್ರೊ. ಎನ್. ಕೃಷ್ಣಸ್ವಾಮಿ

(ಜೂನ್ ಸಂಚಿಕೆಯಿಂದ ಮುಂದುವರೆದುದು)

## ಸಂನ್ಯಾಸಿಗೆ ಒಂದು ಮಾಸಾಶನ

೧೯೦೨ರ ಏಪ್ರಿಲ್ ತಿಂಗಳಲ್ಲಿ ಮಿಸ್ ಮೆಕ್‌ಲೌಡ್ ಕಲ್ಕತ್ತೆಯಿಂದ ಹಿಮಾಲಯದ ಆಲ್ಮೋರಾಕ್ಕೆ ಹೋದರು. ಹೊರಡುವ ಮೊದಲು ನಡೆದ ಘಟನೆ ತುಂಬ ಹೃದಯಸ್ಪರ್ಶಿಯಾಗಿದೆ. ಅದನ್ನು ಕುರಿತು ಮೆಕ್‌ಲೌಡ್ ಬರೆಯುತ್ತಾರೆ :

'ಒಂದು ದಿನ, ೧೯೦೨, ಏಪ್ರಿಲ್‌ನಲ್ಲಿ ಅವರು ನನಗೆ ಹೇಳಿದರು: "ಈಗ ನನ್ನ ಹತ್ತಿರ ಏನೂ ಇಲ್ಲ. ನನಗಾಗಿ ಒಂದು ಕಾಸೂ ಇಲ್ಲ. ನನಗೆ ಕೊಡಲಾದ ಎಲ್ಲವನ್ನೂ ದಾನ ಮಾಡಿಬಿಟ್ಟೆ."

'ನಾನು ಹೇಳಿದೆ, "ಸ್ವಾಮೀಜಿ, ನೀವು ಬದುಕಿರುವವರೆಗೂ ನಾನು ನಿಮಗೆ ತಿಂಗಳಿಗೆ ೫೦ ಡಾಲರ್‌ಗಳನ್ನು ಕೊಡುತ್ತೇನೆ."

'ಅವರು ಸ್ವಲ್ಪ ಯೋಚಿಸಿ ನಂತರ ಹೇಳಿದರು : "ಅಷ್ಟರಿಂದ ನನ್ನ ಖರ್ಚುಗಳೆಲ್ಲ ಕಳೆಯುವುದೆ?"

'ನಾನು ಹೇಳಿದೆ, "ಹೌದು ಖಂಡಿತ. ಆದರೆ ಇಷ್ಟರಿಂದ ದಿನಾ ಕ್ರೀಂ (ಹಾಲಿನ ಕೆನೆ) ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲ ಅಷ್ಟೆ." (ಸ್ವಾಮಿಗಳಿಗೆ ಐಸ್‌ಕ್ರೀಂ ಬಹು ಇಷ್ಟ!)

'ಆಗಲೇ ನಾನು ವಿವೇಕಾನಂದರಿಗೆ ಇನ್ನೂರು ಡಾಲರ್‌ಗಳನ್ನು ಕೊಟ್ಟೆ (ನಾಲ್ಕು ತಿಂಗಳಿಗಾಗಿ). ಆದರೆ ಆ ನಾಲ್ಕು ತಿಂಗಳು ಕಳೆಯುವುದರೊಳಗೆ ಅವರು ಮಹಾಸಮಾಧಿ ಹೊಂದಿದರು.

'ಒಂದು ದಿನ ಬೇಲೂರು ಮಠದಲ್ಲಿ ಸೋದರಿ ನಿವೇದಿತಾ ಮಕ್ಕಳಿಗೆ ಬಹುಮಾನಗಳನ್ನು ಹಂಚುತ್ತಿದ್ದುದನ್ನು ನಾನು ವಿವೇಕಾನಂದರ ಕೊಠಡಿಯ ಕಿಟಕಿಯಿಂದ ನೋಡುತ್ತಿದ್ದೆ. ಆಗ ಅವರು ನನಗೆ ಹೇಳಿದರು: "ನಾನು ಎಂದೂ ನಲವತ್ತನ್ನು ಮುಟ್ಟುವುದಿಲ್ಲ." ಆಗ ವಿವೇಕಾನಂದರಿಗೆ ಮೂವತ್ತೊಂಭತ್ತು. ನಾನು ಹೇಳಿದೆ, "ಆದರೆ ಸ್ವಾಮೀಜಿ, ಬುದ್ಧ ತನ್ನ ಕೆಲಸವನ್ನೆಲ್ಲ ನಲವತ್ತರಿಂದ ಎಂಭತ್ತು ವಯಸ್ಸಿನ ನಡುವೆಯೇ ಅಲ್ಲವೆ, ಮಾಡಿದ್ದು?" ಆದರೆ ಅವರು ಹೇಳಿದರು, "ನನ್ನ ಸಂದೇಶವನ್ನು ಕೊಟ್ಟಿದ್ದೇನೆ. ನಾನು ಹೋಗಬೇಕು." ನಾನು "ಯಾಕೆ?" ಎಂದು ಕೇಳಿದಾಗ, ವಿವೇಕಾನಂದರು, "ದೊಡ್ಡ ಮರದ ನೆರಳಿನಲ್ಲಿ ಸಣ್ಣ ಮರಗಳು ಬೆಳೆಯುವುದಿಲ್ಲ. ಸ್ಥಳ ತೆರವು ಮಾಡುವುದಕ್ಕಾಗಿ ನಾನು ಹೋಗಬೇಕು." ಆಮೇಲೆ ನಾನು ಹಿಮಾಲಯಕ್ಕೆ ಹೋದೆ. ಅವರನ್ನು ಪುನಃ ನೋಡಲಿಲ್ಲ.'

## ಹದಿನಾಲ್ಕು ವರ್ಷ ವನವಾಸ

ಸ್ವಾಮಿ ವಿವೇಕಾನಂದರು ದೇಹತ್ಯಾಗ ಮಾಡಿದ ಮೇಲೆ ಜೋ ಮೆಕ್‌ಲೌಡ್ ಭಾರತಕ್ಕೆ ಹಿಂದಿರುಗಲು ಮುಂದಾಗಲಿಲ್ಲ. ಹದಿನಾಲ್ಕು ವರ್ಷಗಳು ಆಕೆ ತನ್ನ ಅಕ್ಕ ಬೆಟ್ಟಿಯ ಸಂಸಾರವನ್ನು ನಿಭಾಯಿಸಲು ತೊಡಗಿದರು. ಯೂರೋಪ್, ಅಮೆರಿಕಾ ದೇಶಗಳಲ್ಲಿ ಸ್ವಾಮಿ ವಿವೇಕಾನಂದರ ವೇದಾಂತ ಪ್ರಚಾರದ ಕಾರ್ಯ ಮುಂದುವರಿಯಲು ಅಗತ್ಯವಾದ ಎಲ್ಲವನ್ನೂ ಮಾಡುತ್ತಿದ್ದರು. ಭಾರತಕ್ಕೆ ಬರದಿದ್ದರೂ ಬೇಲೂರು ಮಠದ ಸಂನ್ಯಾಸಿಗಳೊಡನೆ ಪತ್ರ ವ್ಯವಹಾರವನ್ನು ಮಾಡುತ್ತಲೇ ಇದ್ದರು. ಸ್ವಾಮಿ ಶಾರದಾನಂದರು ವಿವೇಕಾನಂದರ ನಂತರ ಜೋಗೆ ಅತಿ ಗೌರವಾರ್ಹರಾದರು. ಜೋ ಮತ್ತು ಅವರ ಗೆಳತಿಯರು ಶಾರದಾನಂದರನ್ನು ಸ್ವಾಮಿ–೨ ಎಂದೇ ಸಂಬೋಧಿಸುತ್ತಿದ್ದರು, ಏಕೆಂದರೆ ಸ್ವಾಮಿ–೧ ವಿವೇಕಾನಂದರು.

ಭಾರತದ ಖ್ಯಾತ ವಿಜ್ಞಾನಿ ಜಗದೀಶಚಂದ್ರ ಬೋಸ್ ಅವರಿಗೂ ಜೋ ಬೆಂಬಲ ಕೊಟ್ಟರು. ನಿವೇದಿತಾ ಮತ್ತು ಕ್ರಿಸ್ಟೀನ್ ವಿವೇಕಾನಂದರ ಶಿಷ್ಯೆಯರು. ಅವರಿಗೂ ಜೋ ಎಲ್ಲ ವಿಧದಲ್ಲಿಯೂ ಸಹಾಯ ಮಾಡುತ್ತಿದ್ದರು. ಜಗದೀಶ್ ಬೋಸರ ವಿದ್ಯಾರ್ಥಿ ಬೊಶಿ ಸೇನ್ ಅವರನ್ನೂ ಜೋ ಪ್ರೋತ್ಸಾಹಿಸಿ ಅವರೂ ಉತ್ತಮ ವಿಜ್ಞಾನಿಯಾಗಲು ನೆರವು ನೀಡಿದರು.

## ವಿವೇಕಾನಂದರು ಇಲ್ಲದ ಭಾರತದಲ್ಲಿ

ಸ್ವಾಮಿ ವಿವೇಕಾನಂದರು ಇಲ್ಲದ ಭಾರತಕ್ಕೆ ಹಿಂದಿರುಗುವುದು ಜೋಗೆ ರುಚಿಸಲಿಲ್ಲ. ಆಮೇಲೆ ನಿವೇದಿತಾ ಸಹ ೧೯೧೧ರಲ್ಲಿ ಕಾಲವಾದರು. ಆಗ ಭಾರತದ ಆಕರ್ಷಣೆ ಇನ್ನೂ ಕಡಿಮೆ ಆಯಿತು. ಆದರೆ ೧೯೧೩ರಲ್ಲಿ ಜೋ ಅಕ್ಕ ಬೆಟ್ಟಿ ಮತ್ತು ಬೆಟ್ಟಿಯ ಮಗಳು ಆಲ್ಬರ್ಟಾ ಭಾರತಕ್ಕೆ ಭೇಟಿಕೊಟ್ಟಾಗ ಶ್ರೀಮಾತೆ ಶಾರದಾದೇವಿಯವರೂ ಬೇಲೂರು ಮಠದ ಸಂನ್ಯಾಸಿಗಳೂ ತಮಗೆ ತೋರಿದ ಆದರ ವಿಶ್ವಾಸಗಳಿಂದ ಸಂತೋಷಗೊಂಡು ಜೋಗೆ ಉತ್ಸಾಹಭರಿತವಾದ ಪತ್ರಗಳನ್ನು ಬರೆದರು. ವಿವೇಕಾನಂದರ ಪ್ರಭಾವ ಈಗ ಇನ್ನೂ ಹೆಚ್ಚಾಗಿದೆ ಯೆಂದು ತಿಳಿಸಿದರು. ಇದರಿಂದ ಮುದಗೊಂಡ ಜೋಸೆಫಿನ್ ೧೯೧೫ರಲ್ಲಿ ಮತ್ತೆ ಭಾರತಕ್ಕೆ ಬಂದರು. ಬಹುಕಾಲ ಭಾರತದ ಉದ್ದ-ಅಗಲ ಪ್ರವಾಸ ಮಾಡಿದರು. ಬೇಲೂರು ಮಠದ ಹಳೆಯ ಅತಿಥಿಗೃಹದಲ್ಲಿ ದೀರ್ಘಕಾಲ ವಾಸಮಾಡಿ ಅಲ್ಲಿನ ಸಂನ್ಯಾಸಿಗಳಿಗೂ ಭಕ್ತವೃಂದಕ್ಕೂ ಎಲ್ಲ ರೀತಿಯಲ್ಲಿಯೂ ಪ್ರೋತ್ಸಾಹ, ಸಹಾಯವನ್ನು ನೀಡಿದರು. ಅತಿಥಿಗೃಹವೇ ಆಕೆಯ ಮನೆ ಆಯಿತು. ಉದಾಹರಣೆಗೆ ಹೇಳುವುದಾದರೆ ಒಂದು ದಿನ ಮಠದ ಅಧಿಕಾರಿಗಳಿಗೆ ಮಠದಲ್ಲಿ ಒಂದು ಗೋಶಾಲೆ ಇರ ತಕ್ಕದ್ದೆಂದು ಶಿಫಾರಸು ಮಾಡಿ ಅದಕ್ಕೆ ಅಗತ್ಯವಾದ ಹಸುಗಳನ್ನು ಭಾರತದಿಂದಲೂ ಅಮೆರಿಕದಿಂದಲೂ ತಮ್ಮ ಖರ್ಚಿನಿಂದಲೇ ಒದಗಿಸಿ ಮಠದ ಬ್ರಹ್ಮಚಾರಿಗಳಿಗೆ ಪುಷ್ಟಿಕರವಾದ ಹಾಲು ದೊರೆಯುವ ಏರ್ಪಾಡು ಮಾಡಿದರು.

ಬ್ರಿಟಿಷ್ ಸರ್ಕಾರಕ್ಕೆ ಬೇಲೂರು ಮಠದ ಸಂನ್ಯಾಸಿಗಳ ಮೇಲೆ



**ಬೇಲೂರು ಮಠದ ಹಳೆಯ ಅತಿಥಿಗೃಹದಲ್ಲಿ ಜೋಸೆಫಿನ್ ಮೆಕ್‌ಲೌಡ್**

ಸದಾ ಸಂಶಯದ ದೃಷ್ಟಿ— ಇವರು ಕ್ರಾಂತಿಕಾರಿ, ಹಿಂಸಾತ್ಮಕ ಯುವಕರನ್ನು ಸರ್ಕಾರದ ವಿರುದ್ಧ ಎತ್ತಿ ಕಟ್ಟುತ್ತಾರೆ, ಅಂತಹ ಉಗ್ರಗಾಮಿಗಳಿಗೆ ಮಠದಲ್ಲಿ ಆಶ್ರಯ ಕೊಡುತ್ತಾರೆ ಎಂದು. ಅದಕ್ಕೆ ಸರಿಯಾಗಿ ಮಠಕ್ಕೆ ಹೊಸದಾಗಿ ಬ್ರಹ್ಮಚಾರಿಗಳಾಗಿ ಸೇರುವ ಕೆಲವು ಯುವಕರು ಕ್ರಾಂತಿಕಾರಿಗಳಾಗಿದ್ದದ್ದೂ ಉಂಟು. ಇಂತಹ ಸಂಶಯ ದೃಷ್ಟಿಯಿಂದಾಗಿ ಮಠದ ಸಂನ್ಯಾಸಿಗಳಿಗೆ ಕಿರುಕುಳ ಆಗುತ್ತಿದ್ದಿತು. ಸ್ವಾಮಿ ಶಾರದಾನಂದರು ಪೋಲೀಸ್ ಸ್ಟೇಷನ್ನಿಗೆ ಹೋಗಿ ಸಮಜಾಯಿಷಿ ಹೇಳಬೇಕಾಗಿ ಬರುತ್ತಿದ್ದಿತು. ಜೋಸೆಫಿನ್ ಮಠದಲ್ಲಿರುತ್ತಿದ್ದಾಗ ಈ ಕಿರುಕುಳ ನಿಂತಿತು, ಏಕೆಂದರೆ ಈಕೆಗೆ ಇಂಗ್ಲೆಂಡಿನಲ್ಲಿಯೂ ಭಾರತದಲ್ಲಿಯೂ ಹಿರಿಯ ಬ್ರಿಟಿಷ್ ಅಧಿಕಾರಿಗಳ ವೈಯಕ್ತಿಕ ಪರಿಚಯ ಇದ್ದಿತು. ಬಂಗಾಳದ ಗವರ್ನರ್ ಲಾರ್ಡ್ ಕಾರ್ಮೈಕೇಲನನ್ನೇ ನೋಡಿ ಮಠದ ಸಂನ್ಯಾಸಿಗಳು ರಾಜಕೀಯದಿಂದ ದೂರ ಇರುವವರೆಂದೂ, ಇದು ಮಠದ ನಿಯಮಾವಳಿಯಲ್ಲಿಯೇ ದಾಖಲಾಗಿದೆಯೆಂದೂ, ಮಠದಿಂದ ಸರ್ಕಾರಕ್ಕೆ ಯಾವ ಅಪಾಯವೂ ಇಲ್ಲವೆಂದೂ ಮನದಟ್ಟು ಮಾಡಿಕೊಟ್ಟರು. ಇದರಿಂದಾಗಿ ಪೋಲೀಸ್ ಕಿರುಕುಳ ತಪ್ಪಿತು.

೧೯೧೬ರಲ್ಲಿ ಜೋಸೆಫಿನ್ ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಮಾಡಿದರು. ಬೆಂಗಳೂರು ರಾಮಕೃಷ್ಣ ಆಶ್ರಮದಲ್ಲಿ (ಈಗ ರಾಮಕೃಷ್ಣ ಮಠ) ಒಂದು ದಿನ ಜೋಸೆಫಿನ್ ಆಗ ಅಲ್ಲಿದ್ದ ಸ್ವಾಮಿ ಬ್ರಹ್ಮಾನಂದರನ್ನು ಕಾಣಲು ಬಂದರು. ಸ್ವಾಮಿ ಬ್ರಹ್ಮಾನಂದರು ರಾಮಕೃಷ್ಣರ ಶಿಷ್ಯರು, ರಾಮಕೃಷ್ಣ ಮಠದ ಅಧ್ಯಕ್ಷರಾಗಿದ್ದರು. ಸ್ವಲ್ಪ ಹಾಸ್ಯಸ್ವಭಾವದ ಅವರು ದೂರದಿಂದಲೇ ಜೋ ಬರುತ್ತಿರುವುದನ್ನು ಕಂಡು ಆಶ್ರಮದ ಒಳಗೆ ಹೋಗಿ ತಮಗೆ ಮೈಸರಿಯಾಗಿಲ್ಲವೆಂದು ಹೇಳಿ ಕಳುಹಿಸಿದರು. ಹೀಗೆ ಎರಡು ಮೂರು ಬಾರಿ ನಡೆದಮೇಲೆ, ಒಂದು ದಿನ ಜೊಸೆಫಿನ್ ಬ್ರಹ್ಮಾನಂದರನ್ನು ನೋಡಿಯೇ ತೀರಬೇಕೆಂದು ಒಂದು ಉಪಾಯ ಹೂಡಿದರು. ಆ ದಿನ ಜೊಸೆಫಿನ್ ಹಸಿರು ಬಣ್ಣದ ಬಟ್ಟೆ ಧರಿಸಿ ಬಂದರು. ಬಸವನಗುಡಿ ರಸ್ತೆಯಿಂದ ಆಶ್ರಮದ ದ್ವಾರವನ್ನು ಪ್ರವೇಶಿಸಿದವರೇ ಗಿಡ ಮರಗಳ ಪಕ್ಕದಲ್ಲಿ ನಡೆದರು, ಅವರ ಬಟ್ಟೆ ಕೆಮೊಫ್ಲೇಜ್ ಆಗಿ ಹಸಿರಿನೊಂದಿಗೆ ಹಸಿರಾಗಿ ಅವರು ಬರುತ್ತಿರುವುದು ಬ್ರಹ್ಮಾನಂದರಿಗೆ ಕಾಣಲಿಲ್ಲ. ವರಾಂಡದೊಳಕ್ಕೆ ಬಂದ ಮೆಕ್‌ಲೌಡ್ ಬ್ರಹ್ಮಾನಂದರನ್ನು ತರಾಟೆಗೆ ತೆಗೆದುಕೊಂಡರು : '*Naughty boy, now how will you escape?*' (ತುಂಟ ಹುಡುಗ, ಈಗ ಹೇಗೆ ತಪ್ಪಿಸಿಕೊಳ್ಳುವೆ?) ಸ್ವಾಮಿ ಬ್ರಹ್ಮಾನಂದರು ಪೆಚ್ಚಾಗಿ, 'ಈವತ್ತು ನಾನು ಆರೋಗ್ಯವಾಗಿದ್ದೇನೆ' ಎಂದರು. ನಗುತ್ತ ಜೊಸೆಫಿನ್ ಹೇಳಿದರು : 'ಈಗ ಇನ್ನೇನು ತಾನೇ ಹೇಳಲು ಸಾಧ್ಯ? ಇಂದು ನಾನು ನಿಮ್ಮನ್ನು ಹಿಡಿದು ಹಾಕಿದ್ದೇನೆ, ಅಲ್ಲವೆ?' ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾಗಿದ್ದ, ಎಲ್ಲರೂ ಬಹು ಗೌರವ ಭಕ್ತಿಗಳಿಂದ ಕಾಣುತ್ತಿದ್ದ ಬ್ರಹ್ಮಾನಂದರಲ್ಲಿಯೇ ಅಷ್ಟೊಂದು ಸಲಿಗೆ ಸದರ ವಿವೇಕಾನಂದರ ಆಪ್ತ ಬಂಧುವಾಗಿದ್ದ ಜೋಗಲ್ಲದೆ ಮತ್ತಾರಿಗೆ ಸಾಧ್ಯವಾಗಿದ್ದೀತು?

## ಬೇಲೂರು ಮಠದ ಅತಿಥಿಗೃಹದಲ್ಲಿ

ವಿವೇಕಾನಂದರು ಹೇಳಿದ್ದರು, 'ಓ, ಮಿಸೆಸ್ ಬುಲ್ ಮತ್ತು ಮಿಸ್ ಮೆಕ್‌ಲೌಡ್ ಹಿಂತಿರುಗಿ ಬಂದು ಭಾರತದಲ್ಲಿ ವಾಸಿಸಿದರೆ ಜನ ಸ್ಫೂರ್ತಿ ಪಡೆಯುವರು. ಅದೊಂದು ಪವಿತ್ರತೆಯ ಸ್ಪರ್ಶ... ನನಗೆ ಚೆನ್ನಾಗಿ ಗೊತ್ತಿದೆ... ಆ ಮಧುರವಾದ, ಮನೋಹರವಾದ ನಡತೆ—ಮನಸ್ಸು ಮತ್ತು ಆತ್ಮವೂ ಹಿರಿತನ ಹೊಂದಿರಬೇಕು.' ಅದೇ ಪ್ರಕಾರ ಜೋಸೆಫಿನ್ ಮೆಕ್‌ಲೌಡ್ ೧೯೧೫ರ ನಂತರ ಅನೇಕ ಬಾರಿ ಭಾರತಕ್ಕೆ ಹಿಂದಿರುಗಿ ದೀರ್ಘಕಾಲ ಬೇಲೂರು ಮಠದ ಅತಿಥಿಗೃಹ (ಈಗ ಇದು ಅಧ್ಯಕ್ಷರ ವಾಸಗೃಹವಾಗಿದೆ)ದ ಮೇಲಿನ ಮಹಡಿಯಲ್ಲಿ ಒಬ್ಬರೇ ಇರುತ್ತಿದ್ದರು. ಪಾಶ್ಚಾತ್ಯ ದೇಶಗಳಲ್ಲಿ ವೈಭವೋಪೇತ ಜೀವನ ನಡೆಸುತ್ತಿದ್ದ ಈಕೆ ಮಠದಲ್ಲಿರುವಾಗ ಎಲ್ಲ ಸಾಧುಗಳ ಹಾಗೆಯೇ ನಿರಾಡಂಬರವಾದ ಅತಿ ಸರಳ ಜೀವನ ನಡೆಸುತ್ತಿದ್ದರು. ಭಾರತದ ವಿವಿಧ ಪ್ರದೇಶಗಳಲ್ಲಿ ಸಂಚರಿಸಿ ಅಲ್ಲಿ ವಿವೇಕಾನಂದರ ಕೆಲಸಕ್ಕೆ ಸ್ಫೂರ್ತಿಯ ಪ್ರಸಾರ ಮಾಡುತ್ತಿದ್ದರು. ವಿವೇಕಾನಂದರನ್ನು ಕಂಡು ಅವರ ವ್ಯಕ್ತಿತ್ವದ ಪ್ರಭಾವ ಹೊಂದದ ನೂರೂರು ಸಾಧುಗಳಿಗೂ ಇತರ ಭಕ್ತರಿಗೂ ಸದಾ ಸ್ವಾಮೀಜಿಯವರ ನೆನಪನ್ನು ಮೂಡಿಸುತ್ತಿದ್ದರು. ಆದುದರಿಂದಲೇ ಹಿರಿಯ ಸಂನ್ಯಾಸಿಗಳಿಗೂ ಕಿರಿಯ ಬ್ರಹ್ಮಚಾರಿಗಳಿಗೂ ಜೋಜೋ ಜೊತೆಗೆ ಮಾತನಾಡುವುದು ಇಷ್ಟವಾದ ಸಂಗತಿಯಾಗಿದ್ದಿತು.

೧೯೨೩ರ ದುರ್ಗಾಪೂಜೆಯಲ್ಲಿ ಜೋ ಉತ್ಸಾಹದಿಂದ ಪಾಲುಗೊಂಡರು. ಆ ಸಮಯದಲ್ಲಿ ಮಾಸ್ಟರ್ ಮಹಾಶಯರನ್ನು ಕೇಳಿದರು : 'ನಿಮಗೆ ರಾಮಕೃಷ್ಣರಲ್ಲಿ ಕಂಡುಬಂದ ಅತಿ ಮುಖ್ಯ

ಅಂಶ ಯಾವುದು?' ಮಾಸ್ಟರ್ ಮಹಾಶಯ ಹೇಳಿದರು, 'ಅವರು ಸದಾ ಭಗವದ್ಭಾವ(God-consciousness) ದಲ್ಲಿರುತ್ತಿದ್ದರು.' ಆಮೇಲೆ ಅಲ್ಲಿಗೆ ಬಂದ ಸ್ವಾಮಿ ಅಭೇದಾನಂದರಿಗೂ ಅದೇ ಪ್ರಶ್ನೆ ಹಾಕಿದರು. ಅಭೇದಾನಂದರು ಹೇಳಿದರು : 'ಅವರೊಬ್ಬ ದೈವೋನ್ಮತ್ತ ಮನುಷ್ಯ!' ನಂತರ ಬಂದ ಸ್ವಾಮಿ ಶಾರದಾನಂದರನ್ನು ಇದೇ ಪ್ರಶ್ನೆ ಕೇಳಿದಾಗ ಅವರಿಂದ ಬಂದ ಉತ್ತರ, 'ದೈವ ಚಿಂತನೆ.'


ಲಾಲಿಕ್ ರಚಿಸಿದ ಗಾಜಿನ ಮೇಲೆ ಚಿತ್ರಗೊಂಡ ವಿವೇಕಾನಂದರ ಮೂರ್ತಿ

ಜೋ ಮಾಸ್ಟರ್ ಮಹಾಶಯರಿಗೆ ಒಂದು ಹಳೆಯ ಮಂಚವನ್ನು ತೋರಿಸಿ, 'ಇದು ಅಮೆರಿಕದಲ್ಲಿ ವಿವೇಕಾನಂದರು ಮಲಗುತ್ತಿದ್ದ ಮಂಚ, ಇದು ಅವರು ಉಪಯೋಗಿಸಿದ ಮಗ್ಗಲು ಹಾಸಿಗೆ' ಎಂದಾಗ ಮಾಸ್ಟರ್ ಮಹಾಶಯ ರೋಮಾಂಚಗೊಂಡು ಅದನ್ನು ಕಣ್ಣಿಗೆ ಒತ್ತಿಕೊಂಡರು. ಆಮೇಲೆ ಲಾಲಿಕ್ ರಚಿಸಿದ ಗಾಜಿನ ಮೇಲೆ ಚಿತ್ರಗೊಂಡ ವಿವೇಕಾನಂದರ ಮೂರ್ತಿಯನ್ನು ತೋರಿಸಿದರು. ಹೀಗೆ ಜೋ ಸದಾ ರಾಮಕೃಷ್ಣ-ವಿವೇಕಾನಂದರ ವಿಷಯದಲ್ಲಿಯೆ ಮಗ್ನರಾಗಿರುತ್ತಿದ್ದರು.

## ರಾಮಕೃಷ್ಣ - ವಿವೇಕಾನಂದ ನಾಣ್ಯ

ಶ್ರೀ ಕೌಶಿಕ್ ಎಂಬುವವರು (ಅವರು ತಮ್ಮ ಹೆಸರನ್ನು Cowsic ಎಂದು ಬರೆಯುತ್ತಿದ್ದರು) ಮೈಸೂರು ಸರ್ಕಾರದ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಮುಖ್ಯ ಇಂಜಿನಿಯರ್ ಆಗಿದ್ದರು. ರಾಮಕೃಷ್ಣ-ವಿವೇಕಾನಂದರ ಪರಮ ಭಕ್ತರು, ಸ್ವಾಮಿ ವಿವೇಕಾನಂದರನ್ನು ಕಂಡಿದ್ದರು. ಒಂದು ಬದಿಯಲ್ಲಿ ರಾಮಕೃಷ್ಣ, ಇನ್ನೊಂದು ಬದಿಯಲ್ಲಿ ವಿವೇಕಾನಂದರ ಫೋಟೋ ಇದ್ದ ಒಂದು ಚಿತ್ರವನ್ನು ಕೌಶಿಕ್ ಸದಾ ತಮ್ಮ ಜೇಬಿನಲ್ಲಿ ಇಟ್ಟುಕೊಂಡಿರುತ್ತದ್ದರು. ಹಿಂದೆ ಈ ಚಿತ್ರ ಜನಪ್ರಿಯವಾಗಿದ್ದಿತು, ಬಜಾರಿನಲ್ಲಿ ಸಿಗುತ್ತಿದ್ದಿತು. ಒಂದು ದಿನ ಅವರು ನದೀ ತೀರದಲ್ಲಿ ನಡೆಯುತ್ತಿದ್ದರು. ಶಿವನ ಸಮುದ್ರದಲ್ಲಿ, ಕಾವೇರಿ ತೀರದಲ್ಲಿ ಎಂದು ಊಹಿಸಬಹುದು, ಏಕೆಂದರೆ ಕೌಶಿಕ್ ಬಹುಕಾಲ ಅಲ್ಲಿನ ಜನರೇಟರ್‌ಗಳ ಉಸ್ತುವಾರಿ ಮಾಡುತ್ತಿದ್ದವರು. ನಡೆಯುತ್ತಿದ್ದಾಗ ಕಾಲು ಜಾರಿ ನದಿಯಲ್ಲಿ ಬಿದ್ದರು. ಪ್ರವಾಹ ವೇಗವಾಗಿ ಚೂಪಾದ ಬಂಡೆಗಳ ಮೇಲೆ ಹರಿಯುತ್ತಿದ್ದಿತು. ಅಸಹಾಯಕರಾಗಿ ಕೌಶಿಕ್ ನೀರಿನಲ್ಲಿ ಕೊಚ್ಚಿಕೊಂಡು ಹೋದರು. ಆಗ ವಿವೇಕಾನಂದರ ಧ್ವನಿ ಕೇಳಿಸಿತು : 'ಮೂರ್ಖ, ಎಚ್ಚರಿಕೆಯಿಂದ ನಡೆಯಲಿಲ್ಲ ಏಕೆ?' ಹೇಗೋ ಒಂದು ಬಂಡೆಯ ಆಸರೆ ಸಿಕ್ಕಿತು. ನಿಧಾನವಾಗಿ ಬಂಡೆಯ ಮೇಲೆ ಹತ್ತಿದರು, ಪ್ರವಾಹದಿಂದ ಬಚಾವ್ ಆದರು. ಆದರೆ ಅವರ ಬಟ್ಟೆಯೆಲ್ಲ ಚೂರುಚೂರಾಗಿ ನೀರಿನ ಪಾಲಾಗಿದ್ದವು. ಜೇಬಿನಲ್ಲಿದ್ದ ರಾಮಕೃಷ್ಣ-ವಿವೇಕಾನಂದರ ಚಿತ್ರವೂ ನೀರಿನಲ್ಲಿ ಹೋಯಿತು. ಕೆಲವು ಘಂಟೆಗಳ ನಂತರ ಯಾರೋ ಕೌಶಿಕರನ್ನು ನೋಡಿದರು. ಜನ ಸೇರಿತು. ಒಂದು ಗಳುವನ್ನು ಬಂಡೆಯ ಮೇಲಿದ್ದ ಕೌಶಿಕರಿಗೆ ಚಾಚಿದರು. ಅವರು ಕ್ರಮೇಣ ದಡ ಸೇರಿದರು.

ಮಾರನೆಯ ದಿನ ಅವರು ತಮ್ಮ ವಿಶಾಲವಾದ ಬಂಗಲೆಯ ವರಾಂಡದಲ್ಲಿ ಕುರ್ಚಿಯಲ್ಲಿ ಕುಳಿತಿದ್ದರು. ಕೌಶಿಕ್ ಇನ್ನೂ ತಮ್ಮ ಅನುಭವದ ಗುಂಗಿನಲ್ಲಿಯೇ ಇದ್ದರು. ಆಗ ಒಬ್ಬ ಸೇವಕ ಒಬ್ಬ ಹರಕು ಬಟ್ಟೆಯ ಆಗಂತುಕನನ್ನು ಕರೆದು ತಂದ. ಆ ವ್ಯಕ್ತಿ ಮೇಲುಸಿರು ಬಿಡುತ್ತಿದ್ದ. ಮಾತು ಆಡದೆ ಅವನು ರಾಮಕೃಷ್ಣ-ವಿವೇಕಾನಂದರ ಚಿತ್ರವನ್ನು ಕೌಶಿಕರಿಗೆ ಕೊಟ್ಟ. ಅದು ಒದ್ದೆ ಆಗಿದ್ದಿತು. ಆಶ್ಚರ್ಯದಿಂದ ಕೌಶಿಕ್ ಅವನನ್ನು ಕೇಳಿದರು : 'ಇದು ಎಲ್ಲಿ ಸಿಕ್ಕಿತು? ನೀನು ಎಲ್ಲಿಂದ ಬಂದೆ?' ಆ ವ್ಯಕ್ತಿ, 'ನಿಮಗೆ ಕೊಡಬೇಕೆಂದು ಒಬ್ಬರು ಕೊಟ್ಟರು. ಅಲ್ಲಿಂದ ಓಡಿ ಬಂದೆ' ಎಂದನು. ಕೌಶಿಕ್, 'ಏಕೆ ಓಡಿ ಬಂದೆ?' ಎಂದು ಕೇಳಿದಾಗ, ಆ ವ್ಯಕ್ತಿ 'ಗೊತ್ತಿಲ್ಲ! ಯಾರೋ ನನ್ನನ್ನು ಓಡಿಸಿದ ಹಾಗೆ ಆಯಿತು. ಬಲವಂತವಾಗಿ ಓಡಿದೆ' ಎಂದು ಹೇಳಿದನು. ಅವನು ಕೆಲವು ಮೈಲಿ ದೂರ ಓಡಿದ್ದ!

ಕೆಲವು ಕಾಲ ಕಳೆದ ಮೇಲೆ ಕೌಶಿಕ್ ಜೋ ಮೆಕ್ಲೌಡ್‌ರನ್ನು ಭೇಟಿ ಮಾಡಿದರು. ಈ ಘಟನೆಯನ್ನು ಜೋಗೆ ಹೇಳಿದರು. ಆಮೇಲೆ, 'ಕಾಗದದ ಚಿತ್ರಕ್ಕೆ ಬದಲಾಗಿ ಲೋಹದ ನಾಣ್ಯವಾಗಿದ್ದರೆ ನೀರಿಗೆ ಬಿದ್ದರೂ ಒದ್ದೆ ಆಗುತ್ತಿರಲಿಲ್ಲ. ಒಂದು ಕಡೆ ಪರಮಹಂಸರ ಮುಖ, ಇನ್ನೊಂದು ಕಡೆ ವಿವೇಕಾನಂದರ ಮುಖದ ನಾಣ್ಯ ತಯಾರಿಸಬಹುದೆ' ಎಂದು ವಿಚಾರಿಸಿದರು. ಜೋ ಇದಕ್ಕೆ ಸಮ್ಮತಿಸಿದರು. ತಾನೇ ಇದನ್ನು ಮಾಡಿಸಲು ಒಪ್ಪಿದರು. ಕೌಶಿಕ್ ಈ ಕಾರ್ಯಕ್ಕಾಗಿ ಆಕೆಗೆ ಸಾವಿರ ರೂಪಾಯಿ ಕೊಟ್ಟರು. ಪ್ಯಾರಿಸಿಗೆ ಹೋದಮೇಲೆ ಜೋ ಲಾಲಿಕ್ (Lalique) ಎಂಬ ಕಲಾವಿದನಿಂದ ನಾಣ್ಯದ ವಿನ್ಯಾಸವನ್ನು ಮಾಡಿಸಿದರು. ಹಲವು ಸಾವಿರ ನಾಣ್ಯಗಳು ತಯಾರಾದವು. ರಾಮಕೃಷ್ಣ ಭಕ್ತರಿಗೆ ಇವನ್ನು ಹಂಚಿದರು.





೧೯೯೦ರಲ್ಲಿ ಪ್ರಕಟವಾದ ಪ್ರವ್ರಾಜಿಕಾ ಪ್ರಬುದ್ಧಪ್ರಾಣಾ ಬರೆದ *Tantine : Josephine MacLeod* ಎಂಬ ಅವರ ಜೀವನ ಚರಿತ್ರೆಯಲ್ಲಿ ಈ ಘಟನೆಯನ್ನು ವಿವರಿಸಲಾಗಿದೆ. ನಾನು (ಲೇಖಕ) ಅದನ್ನು ಓದಿ ನನ್ನ ಹಿರಿಯ ಮಿತ್ರ ರಾಮಕೃಷ್ಣ ಭಕ್ತರಾದ ಶ್ರೀ ರಾಮಕೃಷ್ಣ ಕೌಶಿಕ್ ಅವರಿಗೆ ಫೋನ್ ಮಾಡಿದೆ, 'ನಿಮ್ಮ ಚರಿತ್ರೆ ಈ ಪುಸ್ತಕದಲ್ಲಿ ಬಂದಿದೆ. ಕಂಗ್ರ್ಯಾಜುಲೇಶನ್ಸ್' ಎಂದು ಹೇಳಿದೆ. ಆಗ ಕೌಶಿಕ್, 'ಅದು ನನ್ನ ಚರಿತ್ರೆ ಅಲ್ಲ, ನಮ್ಮ ತಂದೆಯವರದು. ನಮ್ಮ ತಂದೆ ಬೆಂಗಳೂರಿನಲ್ಲಿಯೇ ಫೋರ್ಜಿಂಗ್ ಕಂಪನಿಯಲ್ಲಿ ಈ ನಾಣ್ಯಗಳನ್ನು ಟಂಕಿಸಿದರು. ಈ ವಿಷಯ ಪುಸ್ತಕದಲ್ಲಿ ಬಂದಿಲ್ಲ,' ಎಂದು ಹೇಳಿದರು. ರಾಮಕೃಷ್ಣ ಕೌಶಿಕ್ ಅವರಿಗೆ ಸುಮಾರು ೯೦ ವರ್ಷ ವಯಸ್ಸು. ಈಗಲೂ ಅವರು ಆಗಾಗ ಬೆಂಗಳೂರು ರಾಮಕೃಷ್ಣ ಮಠಕ್ಕೆ ಬರುತ್ತಿರುತ್ತಾರೆ.